ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 7- 12
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶಿಶುನಾಳ ಷರೀಫರ ಜೀವನ ಮತ್ತು ಸಂದೇಶ

**ಚಿದಾನಂದ ಕೆ ಡಿ***

*ಕನ್ನಡ ಸಂಶೋಧಕರು, ಕಳಸಾಪುರ ಗ್ರಾಮ, ಕಳಸಾಪುರ ಅಂಚೆ, ಲಕ್ಯಾ ಹೋಬಳಿ,
ಚಿಕ್ಕಮಗಳೂರು ತಾಲೂಕು ಮತ್ತು ಜಿಲ್ಲೆ

***Abstract:***

*ಅಭಿಜಾತ ಕಲಾವಿದರಾದ ಷರೀಪರು ಸಣ್ಣ ವಯಸ್ಸಿನಲ್ಲಿಯೇ ಹಳ್ಳಿಗಳಲ್ಲಿ ನಡೆದಯುತ್ತಿದ್ದ ಹಬ್ಬ–ಹರಿದಿನ, ಜಾತ್ರೆ ಉತ್ಸವಗಳಲ್ಲಿ ಭಾಗವಹಿಸುತ್ತಿದ್ದರು. ಸಕಲಕಲಾವಲ್ಲಭರಾದ ಷರೀಫರು ಶರಣರ ವಚನಗಳು ಮತ್ತು ಅನುಭಾವ ಪದಗಳನ್ನು ಹಾಡುತ್ತ, ವಿವಿಧ ವೇಷ ಹಾಕುತ್ತ, ಬಗೆಬಗೆಯ ಬಯಲಾಟಗಳಲ್ಲಿ ಪಾತ್ರವಹಿಸಿ ತಮ್ಮ ಕಲೆಗಾರಿಕೆಯನ್ನು ಜನಮನದ ವಿಲಾಸಗಳಿಗೆ ತಲುಪಿಸುವ ಮೂಲಕ ವಿ ಕಲೆಗಳ ವಿಕಾಸಕ್ಕೆ ದುಡಿಯುತ್ತಿದ್ದರು. ಮೊಹರಂ ಪರ್ವ ಸಮಯದಲ್ಲಿ ತಲೆ ಎತ್ತುವ ಕರ್ಬಲಾ ಮೇಳಗಳಿಗಾಗಿ ರಿವಾಯತ್ ಪದ ರಚಿಸಿಕೊಟ್ಟರು, ಲಾವಣಿಗಳನ್ನೂ ಬರೆದರು. ಹೀಗೆ ನಿಧಾನವಾಗಿ ಸಾಹಿತ್ಯಪಥದಲ್ಲಿ ತಮ್ಮ ಹೆಜ್ಜೆ ಮೂಡಿಸಿ, ಮುಂದಿನ ಸೃಷ್ಟಿಗೆ ಅಗತ್ಯ ವಾದ ಪೂರ್ವಸಿದ್ಧತೆ ಮಾಡಿಕೊಂಡರು. ಕಳಸದ ಗುರುಗೋವಿಂದ ಭಟ್ಟರು, ಅಂಕಲಗಿಯ ಅಡವಿ ಸ್ವಾಮಿಗಳು, ಗರಗದ ಮಡಿವಾಳಪ್ಪ ನವರು, ನವಿಲುಗುಂದದ ನಾಗಲಿಂಗಪ್ಪನವರು, ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳು ಮುಂತಾದ ಸಮಕಾಲೀನ ಸಾಧುಸತ್ಪುರುಷರ ಸಾನ್ನಿಧ್ಯ, ಸಂಸರ್ಗಗಳಿಂದ ಅನುಭಾವಿಯಾಗಿ ಮಾಗಿದರು. ಪ್ರಸ್ತುತ ಲೇಖನದಲ್ಲಿ ಶಿಶುನಾಳ ಷರೀಫರ ಜೀವನ ಮತ್ತು ಸಂದೇಶವನ್ನು ವಿವರಿಸಲಾಗಿದೆ.*

**Keywords:** *ಶಿಶುನಾಳ ಷರೀಫ, ತತ್ವಜ್ಞಾನಿ, ತತ್ವಪದ, ರಿವಾಯತ್, ವಚನ, ಕನ್ನಡ ಸಾಹಿತ್ಯ.*

## ಪೀಠಿಕೆ

ಷರೀಫರು ಕ್ರಿ.ಶ ಮಾರ್ಚ್ 1819 ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಶಿಶುನಾಳ ಗ್ರಾಮದಲ್ಲಿ ಇಮಾನ್ ಹಜರತ್ ಮತ್ತು ಹಜ್ಜೂಮಾ ದಂಪತಿಯ ಪುತ್ರನಾಗಿ ಜನಿಸಿದರು. 1891ರಲ್ಲಿ ಕಾಲವಾದರು. ಮಹಮ್ಮದ್ದೀಯ ಕುಟುಂಬದಲ್ಲಿ ಹುಟ್ಟಿದ ಷರೀಫರ ವಿದ್ಯಾಭ್ಯಾಸವು ಕೂಲಿಮಠದಲ್ಲಿ ಪ್ರಾರಂಭವಾಗುತ್ತದೆ. ಶಿಸ್ತು, ಶ್ರದ್ಧೆ, ಭಕ್ತಿ, ಪಾವಿತ್ರ್ಯದ ದೃಷ್ಟಿಯಿಂದ ಕೂಲಿಮಠದಲ್ಲೇ ಓದು–ಬರೆಹ ಕಲಿತ ಷರೀಫರು. ಮುಲ್ಕಿ ಪರೀಕ್ಷೆ ಪಾಸು ಮಾಡಿದರು. ಮುಲ್ಕಿ ಪರೀಕ್ಷೆ ಪಾಸು ಮಾಡಿದ ನಂತರ ಮೋಡಿ ಭಾಷೆಯನ್ನು ಕಲಿತುಕೊಂಡು, ತಮ್ಮ ಮಾತೃಭಾಷೆಯಾದ ಉರ್ದುವನ್ನು ಕರಗತ ಮಾಡಿಕೊಂಡರು. ಇವೆಲ್ಲಕ್ಕೂ ಮಿಗಿಲಾಗಿ ಚಿಕ್ಕಂದಿನಿಂದಲೇ ರಾಮಾಯಣ, ಮಹಾಭಾರತ, ದೇವಿ ಪುರಾಣ, ಪ್ರಭುಲಿಂಗಲೀಲೆಯನ್ನು ತಿರಿವಿ ಹಾಕುವುದರೊಂದಿಗೆ ಅವುಗಳ ಅಂತರ್ಯವನ್ನು ಅಂತರಂಗದಲ್ಲಿ ಅರಗಿಸಿ ಕೊಂಡರು. ಬಹುಮುಖ ಪ್ರತಿಭೆಯ ಷರೀಫರು ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಮುಂದು. ಮೋಜು ಮಜಲುಗಳಲ್ಲಿ ವೇಷಗಾರ ವೇಷ ತೊಡವುದು, ಬಯಲಾಟಗಳಲ್ಲಿ ಬಣ್ಣ ಬಳಿದುಕೊಂಡು ಪಾತ್ರ ವಹಿಸುವುದು. ಸರ್ವಜ್ಞ, ಸಪ್ಪಣ (ಸರ್ವಭೂಷಣ

***Please cite this article as:*** ಚಿದಾನಂದ ಕೆ. ಡಿ. (2022). ಶಿಶುನಾಳ ಷರೀಫರ ಜೀವನ ಮತ್ತು ಸಂದೇಶ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(5), 7–12.

ಶಿವಯೋಗಿ) ಕವಿಗಳ ಕಾವ್ಯ ವಾಚನ ಮಾಡುವುದು, ಶಾಸ್ತ್ರಪುರಾಣ ನಡೆದಲ್ಲಿ ತಪ್ಪದೆ ಹಾಜರಾಗಿ ಶ್ರವಣ ಮಾಡುವುದು, ಮೊಹರಂ ಸಂದರ್ಭದಲ್ಲಿ ರಿವಾಯತ್ ಪದಗಳನ್ನು ರಚಿಸಿ ಹೆಜ್ಜೆಮೇಳ ಕುಣಿಸುವುದು ಇವೆ ಮೊದಲಾದ ವಿಷಯಗಳಲ್ಲಿ ಷರೀಫರು ವಿಶೇಷ ಆಸಕ್ತಿವಹಿಸಿದ್ದರು.

ಮುಲ್ಕಿ ಪರೀಕ್ಷೆ ಪಾಸುಮಾಡಿದ ಷರೀಫ್ ಕೆಲವು ದಿನಗಳು ಶಿಶುನಾಳ ಗ್ರಾಮದ ನೆರೆಹೊರೆಯ ಗ್ರಾಮಗಳಾದ ಕ್ಯಾಲಕೊಂಡ, ಪಾಣಿಗಟ್ಟಿ, ಗುಂಜಳ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕ ವೃತ್ತಿ ಮಾಡಿದರು. ನಂತರದ ದಿನಗಳಲ್ಲಿ ಆಧ್ಯಾತ್ಮಿಕ ಚಿಂತನೆಯಲ್ಲಿ ಮುಳುಗಿದ ಷರೀಫರು ತಮ್ಮ ಆ ಆಧ್ಯಾತ್ಮಿಕ ದಾಹ ತೀರಿಸಿಕೊಳ್ಳಲು; 'ಶಿವ ಪಥವರಿದಡೆ ಗುರುಪಥವೇ ಮೊದಲು' ಎಂಬ ಶರಣ ನುಡಿಯಂತೆ ಗುರುವನ್ನು ಅರಸ ತೊಡಗಿದರು. ಸುದೈವದಿಂದ ಅವರಿಗೆ ಕಳಸದ 'ಗೋವಿಂದ ಭಟ್ಟರು' ಗುರುಗಳಾಗಿ ದೊರೆತರು.

ಒಂದು ದಿನ ಅರಳಿಕಟ್ಟೆಯ ಮೇಲೆ ಗುರು ಗೋವಿಂದಭಟ್ಟರು ಮೇಲು ಜಾತಿಯವರೊಡನೆ ಕುಳಿತು ಮಾತನಾಡುತ್ತಿರುವಾಗ ಷರೀಫರು ಅಲ್ಲಿಗೆ ಬರುತ್ತಾರೆ. ಗೋವಿಂದಭಟ್ಟರು ಷರೀಪರನ್ನು ಆ ಕಟ್ಟೆಗೆ ಆಹ್ವಾನಿಸಿ ಹತ್ತಿರ ಕೂರಿಸಿಕೊಳ್ಳುತ್ತಾರೆ. ಇದಕ್ಕೆ ಅಲ್ಲಿದ್ದ ಮೇಲ್ವರ್ಗದವರು ತಿರಸ್ಕಾರದ ನುಡಿಯನ್ನು ಆಡುತ್ತಾರೆ. ಆಗ ಗುರು ಗೋವಿಂದಭಟ್ಟರು ತಮ್ಮ ಜನಿವಾರವನ್ನು ಕಿತ್ತು ಷರೀಫರಿಗೆ ಹಾಕುತ್ತಾರೆ. ಷರೀಫರು ಭಾವ ಪರವಶವಾಗಿ ಗುರುವಿಗೆ ನಮಸ್ಕರಿಸಿ ಹಾಡಲಾರಂಭಿಸುತ್ತಾರೆ.

***'ಹಾಕಿದ ಜನಿವಾರವ ಸದ್ಗುರುನಾಥ***  
***ಹಾಕಿದ ಜನಿವಾರವ***  
***ಹಾಕಿದ ಜನಿವಾರವ ನೂಕಿದೆ ಭಾವದ***  
***ಲೋಕದ ಬ್ರಹ್ಮಜ್ಞಾನ ನೀ ಪಡೆಯಿಂದು'***

ಎಂದು ಸದ್ಗುರುವಿನ ದೀಕ್ಷಾವಿಧಿಗೆ ಆತ್ಮಪರವಶರಾಗಿ ಹಾಡುತ್ತಾರೆ. ಯಾವುದೇ ಜಾತಿ, ಧರ್ಮ, ವರ್ಗಗಳಿಗೆ ನಿಲುಕದ ಗುರು ಭಟ್ಟರು ಶಿಷ್ಯನಿಗೆ ಸದ್ ಪಾಠವನ್ನು ಬೋಧಿಸುವುದು ಷರೀಫರ ಮೇಲೆ ನೇರ ಪ್ರಭಾವವನ್ನು ಬೀರಿತು.

ಷರೀಫರು ತಮ್ಮ ಗುರುವನ್ನು ಹೀಗೆ ವರ್ಣಿಸುತ್ತರೆ....

***'ಸದ್ಗುರು ನಿನ್ನ ಮಾಯಕ್ಕೆ ಮರುಳಾದೆನೋ***  
***ಕರಪಿಡಿದು ಎನ್ನ ಕರಣದೊಳಗೆ ಮೊದಲು***  
***ವರಮಂತ್ರ ಬೋಧಿಸಿ ಕರವಿಟ್ಟು ಶಿರದೊಳು'***

ಎಂಬಂತೆ ಗುರು ಗೋವಿಂದಭಟ್ಟರು ಷರೀಫರಿಗೆ ಜ್ಞಾನದ ದೀವಿಗೆಯನ್ನು ಹಚ್ಚಿ ಬೆಳಗಿದರು.

ಕೆಲಕಾಲದ ನಂತರ ಶರೀಫರಿಗೆ ಕುಂದುಗೋಳದ ನಾಯಕ ಮನೆತನದ ಫಾತಿಮಾಳೊಂದಿಗೆ ಮದುವೆಯಾಯಿತು. ತನ್ನ ಹೆಂಡತಿಯನ್ನು ಪೂಜ್ಯ ಭಾವದಿಂದ ಷರೀಫರು ನೋಡಿದ ಪರಿ ಇದು....

***'ಮೊದಲಿಗೆ ತಾಯ್ಯದಿ ನನ್ನ ಹೆಣ್ತೆ ಮತ್ತೆ***  
***ಸದನಕ ಸೊಸಿಯಾದಿ ನನ್ನ ಹೆಣ್ತೆ ಮತ್ತೆ***  
***ಮುದದಿಂದ ಮೋಹಿಸಿ ಮದುವ್ಯಾದವನಿಗೆ***  
***ಮಗಳೆಂದೆನಿಸಿದೆ ನನ್ನ ಹೆಣ್ತೆ'***

ಎಂದು ಹೆಂಡತಿಯನ್ನು ಸಂಬಂಧದ ಮೂಸೆಯಲ್ಲಿ, ಭಕ್ತಿ ಭಾವದ ನೆಲೆಯಲ್ಲಿ ದರ್ಶನ ಮಾಡಿಸುತ್ತಾರೆ.

ಕಾಲಗತಿಸಿದಂತೆ ಜೀವನದ ಹಾದಿಯ ಪಥ ಬದಲಾಗುವುದು ಸಹಜವೇ ಹಾಗೆಯೇ ಶರೀಫರಿಗೆ ಒಂದು ಹೆಣ್ಣು ಮಗು ಜನಿಸಿ ಬಹು ಬೇಗನೇ ಮರಣವನ್ನಪ್ಪುತ್ತದೆ. ಸ್ವಲ್ಪ ಸಮಯದ ಬಳಿಕ ಅವರ ಹೆಂಡತಿ ಫಾತಿಮಾ ಕೂಡ ತೀರಿಕೊಂಡರು. ಹೆಂಡತಿಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸದೆ ಶರೀಫರು

**'ತಂದೆ ಗುರುಗೋವಿಂದ ಸೇವಕ**

**ಕುಂದುಗೋಳಕೆ ಬಂದು ನಿಂತಾನ್ಯಾಕೋ**

**ಬಂಧುರ ಶಿಶುನಾಧೀಶನ ದಯದಿಂದ**

**ಇಂದಿಗೆ ವಿಷಯದ ವ್ಯಸನಗಳ್ಯಾಕೋ'**

ಎಂದು ಪಾರಮಾರ್ಥಿಕ ನೆಲೆಗೆ ಬಂದು ನಿಲ್ಲುತ್ತಾರೆ. 'ಭಕ್ತರಿಗೆ ಬಡತನವನೇ ಕೊಡು' ಎಂಬ ಶರಣರ ಹಿತನುಡಿಯಂತೆ ಷರೀಫರು ಕೂಡ ಬಡತನವನ್ನು ಮೆಚ್ಚುತ್ತಾರೆ ಬಡತನದ ಬೇಗೆಯಲ್ಲಿ ಕಾದು ಕೆಂಪಾಗಿ ಪಾರಮಾರ್ಥಿಕಕ್ಕೆ ಅನುವಾಗುವುದು ಅವರ ಮಾರ್ಗವಾಗಿತ್ತು.

***'ಬಡತನವೆಂಬುದು ಕಡೆತನಕಿರಲಿ***

***ವಡವಿ ವಸ್ತ ಹಾಳಾಗಿ ಹೋಗಲಿ***

***ನಡುವಂಥ ದಾರಿಯು ತಪ್ಪಿ***

***ಅಡವಿ ಸೇರಿದಂತಾಗಿ ಹೋಗಲಿ'***

ಎಂದು ಲೌಕಿಕ ಜೀವನವನ್ನು ತ್ಯಜಿಸಿ ಬಡತನವನ್ನು ಆಧ್ಯಾತ್ಮಿಕ ಸಿರಿತನಕ್ಕೆ ಮುಂದಾಗುತ್ತಾರೆ.

ಮನಸ್ಸು ಚಂಚಲ, ಅತ್ತ ಇತ್ತ ಹರಿದಾಡುತ್ತಲೇ ಇರುತ್ತದೆ. ನಮ್ಮ ಇಂದ್ರಿಯಗಳು ವಿಷಯಗಳಿಗೆ ಹಾತೊರೆಯುತ್ತವೆ, ಇದಕ್ಕೆ ಮೂಲ ಕಾರಣ ಮನಸ್ಸು. ಆ ಮನಸಿಗೆ ನಮ್ಮ ಜಾಣತನದ ಕಡಿವಾಣ ಹಾಕಬೇಕು ಎಂದು ಷರೀಫರು ಹೇಳುತ್ತಾರೆ.

***'ಅತ್ತ ಇತ್ತ ಹರಿದಾಡುವ ಮನಸಿಗೆ***

***ಮಚ್ಚಿಲ್ಹೊಡೆದು ನಿಲ್ಲಿಸು ಜಾಣ'***

***'ಕಡು ವಿಷಯದಿ ಸಂಸಾರಕೆ ಮರುಗತ***

***ಪೊಡವಿ ತಳದಿ ಮಿಡಿಕ್ಯಾಡುವ ಮನಸಿಗೆ***

***ಮಚ್ಚಿಲ್ಹೊಡೆದು ನಿಲ್ಲಿಸು ಜಾಣ'***

ಎಂದು ಚಂಚಲ ಮನಸ್ಸಿನ ನಿವಾರಣೆಗೆ ಜ್ಞಾನದಮಚ್ಚನ್ನು ಎತ್ತಿಕೊಳ್ಳಿರಿ ಎಂಬ ಸಂದೇಶ ನೀಡುತ್ತಾರೆ. ಷರೀಫರ ಪ್ರಸಿದ್ಧ ತತ್ವಪದವಾದ

***'ಕೋಡಗನ್ನ ಕೋಳಿ ನುಂಗಿತ್ತ***

***ನೋಡವ್ವ ತಂಗಿ ಕೋಡಗನ್ನ ಕೋಳಿ ನುಂಗಿತ್ತ'***

ಎಂಬ ತತ್ವಪದದಲ್ಲಿ ಕೋಡಗವು ಮನಸ್ಸಿನ ಸಂಕೇತವಾಗಿ, ಕೋಳಿಯು ಜ್ಞಾನದ ಉದಯದ ಸಂಕೇತವಾಗಿ ಮೂಡಿ ನಿಂತಿದೆ. ನಮ್ಮ ಮನಸ್ಸು ಚಂಚಲತೆಯ ಕೋತಿಯಯಂತೆ, ಆ

ಚಂಚಲತೆಯನ್ನು ಜ್ಞಾನದ ಜ್ಯೋತಿಯನ್ನು ನಾವೇ ಹಚ್ಚಿಕೊಳ್ಳುವ ಮೂಲಕ ಅಜ್ಞಾನವನ್ನು ತೊಲಗಿಸಿಕೊಳ್ಳಬೇಕು ಎಂಬುದನ್ನು ಸಾಂಕೇತಿಕವಾಗಿ ಹಾಡಿ ಸಮಾಜಕ್ಕೆ ಮಾರ್ಗದರ್ಶನ ನೀಡಿದ್ದಾರೆ.

ಷರೀಫರು ಸಂತೆಯ ರೂಪಕವನ್ನು ಸಂಸಾರಕ್ಕೆ ಹೋಲಿಸುತ್ತ, ಈ ಸಂಸಾರಕ್ಕೆ ಜೀವನಕ್ಕೆ ಕಾಲಿಟ್ಟ ಎಲ್ಲ ಜೀವಿಗಳಿಗೂ ಎಚ್ಚರಿಕೆ ನೀಡುತ್ತಿದ್ದಾರೆ. ಸಂತೆಯಲ್ಲಿ ಹೇಗೊ; ಹಾಗೆಯೇ ಸಂಸಾರದಲ್ಲಿಯೂ ಸಹ ಜೀವಿಯು ಎಚ್ಚರದಿಂದ ಇರಬೇಕು ಎನ್ನುತ್ತಾರೆ. ಹುಲಗೂರ ಸಂತೆಯನ್ನು ನೋಡಿದ ಷರೀಫರು ಅದನ್ನು ಸಂಸಾರಕ್ಕೆ ಹೋಲಿಸುತ್ತಾರೆ.

*'ಸದ್ಯಕಿದು ಹುಲಗೂರ ಸಂತಿ*
*ಗದ್ದಲದೊಳಗ ಯಾಕ ನಿಂತಿ*
*ಬಿದ್ದು ಒದ್ದಾಡಿದರ ಎಬ್ಬಸುವರಿಲ್ಲಾ*
*ಬುದ್ದಿಗೇಡಿ ಮುದುಕಿ ನೀನು*
*ಬಿದ್ದೀಯಬ್ಬೆ ಮುದುಕಿ'*

ಎಂದು ಸಂತೆಯಲ್ಲಿ ಬಿದ್ದ ಮುದುಕಿ ಎಂಬುದು ಸಂಸಾರದಲ್ಲಿ ಬಿದ್ದ ಮುದುಕಿ ಎಂದು ಸಂಕೇತಿಸಿದ್ದಾರೆ. ಮುದುಕಿ ಎಂಬ ಸಂಕೇತವು ಸಂಸಾರದ ನಶ್ವರತೆಯನ್ನು ಅರ್ಥವತ್ತಾಗಿ ಮುಂದಿಡುತ್ತದೆ. ಇಲ್ಲಿ ಸಂಸಾರವು ವಿಷಯ ಸುಖಗಳ ಆಗರ, ಹಾಗಾಗಿ ಈ ಅಲ್ಪ ಸುಖಗಳಿಗೆ ಬೀಳದೆ ಅನಂತ ಸುಖದತ್ತ ತೆರಳಬೇಕು ಎಂಬ ಸುಳಿವು ಕೂಡ ಇದೆ.

ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವ ಸಾಧಕರು ತಾವು ಈ ದರ್ಶನಕ್ಕೆ ಅರ್ಹರೋ ಎಂದು ತಮ್ಮ ಆತ್ಮ ವಿಮರ್ಶೆಗೆ ಮುಂದಾಗುತ್ತಾರೆ. ಅಲ್ಲದೆ ಆತ್ಮ ವಿಮರ್ಶೆಯ ಮೂಲಕ ಸಮಾಜದ ಪ್ರತಿಯೊಂದು ಸ್ತರಗಳನ್ನು ವಿಮರ್ಶಿಸಲು ಮುಂದಾಗುತ್ತಾರೆ. ಇಂತಹ ವಿಮರ್ಶೆಗೆ 'ಸೋರುತಿಹುದು ಮನೆಯ ಮಾಳಿಗೆ' ಉತ್ತಮ ಉದಾಹರಣೆಯಾಗಿದೆ.

*'ಸೋರುತಿಹುದು ಮನೆಯ ಮಾಳಿಗೆ*
*ಅಜ್ಞಾನದಿಂದ ಸೋರುತಿಹುದು ಮನೆಯ ಮಾಳಿಗೆ'*
*'ಸೋರುತಿಹುದು ಮನೆಯ ಮಾಳಿಗೆ*
*ದಾರಾಗಟ್ಟು ಮಾಳ್ಪರಿಲ್ಲ*
*ಕಾಳ ಕತ್ತಲೆಯೊಳಗೆ ನಾನು*
*ಮೇಲಕೇರಿ ಹೋಗಲಾರೆ'*

ಎಂದು ಜ್ಞಾನದ ಶಿಖರಕ್ಕೆ ಏರಲು ಕತ್ತಲೆ, ಅಜ್ಞಾನ ಅಡ್ಡಿಗಲಾಗಿವೆ. ಈ ಅಡ್ಡಿ ಆತಂಕಗಳು ಷರೀಫರಿಗೆ ಇಲ್ಲದಿದ್ದರೂ, ಅವರು ಬದುಕಿದ್ದ ಸಮಾಜದ ಜನ ಸಮುದಾಯಕ್ಕೆ ಇದ್ದವು. ಇವುಗಳು ಸಹಜವಾಗಿ ಷರೀಫರಿಗೂ ಅಡ್ಡಿ ಆತಂಕಗಳಾಗಿ ಕಂಡಿರಬೇಕು.

ಸಮಾಜದಲ್ಲಿ ಬಾಳ್ವೆ ಮಾಡಲು ಹೊನ್ನೆ ಮುಖ್ಯವಲ್ಲ ಹೊನ್ನಿಗಿಂತಲೂ ಶಕ್ತಿಯೊಂದು ಬಾಳ್ವೆಗೆ ಅವಶ್ಯಕತೆ ಇದೆ ಎಂದೂ, ದುಡ್ಡು ಕೆಟ್ಟದು, ಅದು ನಮ್ಮನ್ನು ಹೀನ ಕೃತ್ಯಗಳನ್ನು ಮಾಡಲು ಪ್ರೇರೇಪಿಸುತ್ತಿರುತ್ತದೆ. ಹಾಗಾಗಿ ಅದು ಕೆಟ್ಟದು ಎಂದು ಒಂದು ಪದವನ್ನೇ ಕಟ್ಟಿದ್ದಾರೆ.

*'ದುಡ್ಡು ಕೆಟ್ಟದ್ದು ನೋಡಣ್ಣ–ದುಗ್ಗಾಣಿಗೆ*
*ಹೆಡ್ಡನಾಗ ಬೇಡೋ, ತಿಂದೀ ನೀ ಮಣ್ಣ!'*
*'ಹೆಣ್ಣಿನ ಪೂಜೆಗೆ ಇಳಿಸಿ–ಮಣ್ಣಿನ*
*ಸಂತೇಲಿ ಇಲ್ಲದ ಮರ್ಯಾದೆ ಕೊಡಿಸಿ*
*ಮಿಣ್ಣನೆ ತಿದೀತು ಒಳಗ–ಮೆಲ್ಲನೆ*
*ಥಣ್ಣಗೆ ಮೂಡೀತು ಬೆಂಕಿಯ ಕಿಡಿ'*

ಎಂದು ದುಡ್ಡು ನಮ್ಮನ್ನು ಹೀನ ಮಟ್ಟಕ್ಕೆ ಇಳಿಸುತ್ತದೆ ಹಾಗಾಗಿ ನಾವು ಮೇಲ್ಮಟ್ಟಕೇರಲು ದುಡ್ಡಿನ ಸಹವಾಸ ಬಿಟ್ಟು ಆಧ್ಯಾತ್ಮಿಕ ಪರಿವೆಗೆ ನಮ್ಮ ಮನಸ್ಸನ್ನು ತಿರುಗಿಸಬೇಕು ಎಂಬ ಮಹತ್ವದ ಸಂದೇಶವನ್ನು ಸಾರಿದ್ದಾರೆ.

ಸಾಮಾನ್ಯವಾಗಿ ಮಾನವ ಎಲ್ಲವೂ ನನ್ನದು, ಎಲ್ಲವನ್ನೂ ನಾನೇ ಮಾಡಿದ್ದು ಎಂದುಕೊಳ್ಳುತ್ತ 'ನಾನತ್ವ'ವನ್ನು ಪ್ರದರ್ಶಿಸುತ್ತಾನೆ. ಆದರೆ ಇದಾವುದು ಅವನದಲ್ಲ ಎನ್ನುವುದನ್ನು ಷರೀಫರು ಈ ಕೆಳಕಂಡ ಪದದಲ್ಲಿ ತಿಳಿಸುತ್ತರೆ.

*'ನಾನಾ ಎಂಬುದು ನಾನಲ್ಲ ಈ*
*ಮಾನುಷ ಜನ್ಮ ನಾನಲ್ಲ'*

ಎಲ್ಲದಕ್ಕೂ ನಾನೇ. ನಾನೇ ಮಾಡಿದ್ದು ನನ್ನಿಂದಲೆ ಎಲ್ಲ, ನನ್ನ ಬಿಟ್ಟರೆ ಬೇರೆ ಇಲ್ಲ. ನನಗೆ ಸಮರ್‍ಯಾರಿಲ್ಲ ಎಂದು ಹೇಳುವ ಭಾವನೆಗಳೆಲ್ಲವೂ ಮಾನವರಲ್ಲಿ ಅಹಂಕಾರ ಭಾವವನ್ನು ತೋರುತ್ತದೆ. ಇದು ಯಾವುದೂ ನಮ್ಮಿಂದ ಸಾಧ್ಯವಿಲ್ಲ. ಈ ಮನುಷ್ಯನ ಜನನವು ನಮ್ಮದಲ್ಲ. ಇದರ ಕರ್ತೃ ಕೂಡಾ ನಾನಲ್ಲ ಎನ್ನುತ್ತಾರೆ ಷರೀಫರು.

ಷರೀಫರ ದೃಷ್ಟಿಯಲ್ಲಿ ಕರ್ಮ ಈ ರೀತಿ ಇದೆ.........

*'ಕಷ್ಟದ ಮಾಡಿದೆಯೊ ಈ ಶರೀರದೆ*
*ಕಷ್ಟದ ಮಾಡಿದೆಯಾ'*

ಮೂಲ ಇಸ್ಲಾಂ ಧರ್ಮದಲ್ಲಿ ಕರ್ಮ ಫಲದಲ್ಲಿ ನಂಬಿಕೆ ಇಲ್ಲ. ಆದರೆ ಷರೀಫರಿಗೆ ಹಿಂದೂ ಪುರಾಣ ಗ್ರಂಥಗಳಿಂದ ಆದ ಪ್ರಭಾವದಿಂದಲೇ ಕರ್ಮ ಅಥವಾ ಕೆಲಸವನ್ನು ಮಾಡುವಾಗ ಆದರ ಫಲ ಅಥವಾ ಪ್ರಯೋಜನವನ್ನು ಅನುಭವಿಸುತ್ತೇವೆ. ಇದರ ಫಲವಾಗಿಯೇ ಒಳ್ಳೆಯ ಕರ್ಮ ಅಥವಾ ಒಳ್ಳೆ ಕೆಲಸಕ್ಕೆ ಒಳ್ಳೆಯ ಫಲ, ಕೆಟ್ಟ ಕೆಲಸಕ್ಕೆ ಕೆಟ್ಟ ಫಲವನ್ನು ಅನುಭವಿಸುತ್ತೇವೆ. ಆದುದ್ದರಿಂದ ಇರುವಷ್ಟು ದಿನವಾದರು ಮಾನವರು ಜೀವನ್ಮುಕ್ತರಾಗಲು ಒಳ್ಳೆ ಕರ್ಮಗಳನ್ನು ಮಾಡಿದ ಹಾದಿಯಲ್ಲಿ ಸಾಗಿ ಭಗವಂತನಲ್ಲಿ ಒಂದಾಗಬೇಕು ಎನ್ನುತ್ತಾರೆ ಷರೀಫರು.

ಪರಮಾತ್ಮ ಜೀವಾತ್ಮ ಅಭೇದವನ್ನು ಹೇಳುತ್ತಾರೆ ಷರೀಫರು. ಈ ದೇಹ ಎನ್ನುವುದು ಮಾಯೆ ಬಂಧನದಿಂದ ಮುಕ್ತಗೊಂಡಾಗ ಅದು ತತ್ವದ ಮನೆಯಾಗುತ್ತದೆ. ಭಗವಂತ ವಾಸಿಸುವ ಮಹಾಮನೆಯಾಗುತ್ತದೆ. ಯೋಗ ಸಾಧನೆಯ ಮೂಲಕ ಅಂತರಂಗದ ಪರಮಾತ್ಮನನ್ನು ಕಂಡಾಗ ಆತ್ಮ ಪರಮಾತ್ಮರ ಅದ್ವೈತ ಭಾವವು ಮೂಡುತ್ತದೆ ಎನ್ನುತ್ತಾರೆ ಷರೀಫರು.

ವಿಶ್ವ ಮಾನವತಾ ಧರ್ಮದ ಗುರಿ ಮಾನವರೆಲ್ಲರ ಕಲ್ಯಾಣವೇ ಆಗಿದೆ, ಮಾನವ ಬದುಕಿರುವಾಗಲೇ ತನ್ನ ಬಂಧನಗಳಿಂದ ಮುಕ್ತಗೊಂಡು ದೇವರಲ್ಲಿ ಒಂದಾಗುವುದೇ ಮೋಕ್ಷ,

ದೇವರಿಗಾಗಿ ಸದಾ ಹಂಬಲಿಸುವುದೆ ಭಕ್ತಿ ಯೋಗವಾಗಿದೆ, ಆತ್ಮಜ್ಞಾನವನ್ನು ಸತತ ಧ್ಯಾನದಿಂದ ಪಡೆಯುವುದೇ ಜ್ಞಾನಯೋಗವಾಗಿದೆ, ಮೋಕ್ಷವೆಂದರೆ ಹುಟ್ಟು ಸಾವುಗಳ ಚಕ್ರದಿಂದ ಹೊರ ಬಂದು ಆತ್ಮವು ತನ್ನ ನೈಜಸ್ಥಿತಿಯಲ್ಲಿ ನೆಲೆಗೊಳ್ಳುವುದು, ಹೀಗೆ ಷರೀಫರ ತತ್ವಪದಗಳಲ್ಲಿ ಆಧ್ಯಾತ್ಮ, ಸಾಮಾಜಿಕ ವಿಢಂಬನೆ, ಆತ್ಮವಿಮರ್ಶೆ, ತತ್ವಶಾಸ್ತ್ರದ ಪರಿಕಲ್ಪನೆಗಳು ಒಡಮೂಡಿವೆ. ಶಿಶುನಾಳ ಷರೀಫರು ಉದ್ದಾಮ ಪಂಡಿತರು, ದಾರ್ಶನಿಕರು, ತತ್ವಜ್ಞಾನಿಗಳು, ಹರಿಹರ ಹಜರತ್ ತತ್ವಗಳ ಸಂಗಮ ಆಗಿದ್ದರು. ಲಕ್ಷ್ಮೀನಾರಾಯಣ ಭಟ್ಟರು ಷರೀಫರ ಕುರಿತು ಹೀಗೆ ಹೇಳುತ್ತಾರೆ "ಹತ್ತು ವನಗಳ ಸುತ್ತಿ, ಹೂ ಹೂವನ್ನೂ ಮುತ್ತಿ ಒಂದೇ ಜೇನಿನ ಹುಟ್ಟು ಕಟ್ಟಿದಾತ ಎಂಬ ಮಾತು ಅಕ್ಷರಶಃ ಸತ್ಯ, ಒಟ್ಟಾರೆ ಹೇಳುವುದಾದರೆ ನಿಸ್ಸಂದೇಹವಾಗಿ ಮಹಾಮಹಿಮಾವಂತರು ಸಂತ ಶಿಶುನಾಳ ಷರೀಫರು ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಕುಮಾರ್ ಡಿ. (2016). *ಸಂತ ಶಿಶುನಾಳ ಷರೀಫರ ವಿಶ್ವಧರ್ಮ.* ಚೇತನ್ ಬುಕ್ ಹೌಸ್.
- ಸುಕುಂದ ಆರ್ ಎಸ್. (ಸಂ.) (1993). *ಶಿಶುನಾಳರ ಅನುಭಾವ ಗೀತ ಮಂಜರಿ.* ಸಮಾಜ ಪುಸ್ತಕಾಲಯ.
- ಶಿವಾನಂದ ಗುಬ್ಬಣ್ಣನವರ. (ಸಂ.). *ಶಿಶುನಾಳ ಷರೀಫರ ಗೀತೆಗಳು.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.